ಸಿ.ಸಿ ನಂಬ್ರಃ 938/2023
ಪಿ.ಡಬ್ಲ್ಯೂ : 1

ದಿನಾಂಕಃ 31-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಬಿ.ಆರ್.ಎನ್. ವಕೀಲರಿಂದ

1. ನಾನು ಮಧ್ಯ ಖಾರ್ವಿಕೇರಿಯ ನಿವಾಸಿ. ನಾನು ದೀಪಕ್ ಖಾರ್ವಿಯವರನ್ನು ನ್ಯಾಯಾಲಯದಲ್ಲಿ ನೋಡಿರುತ್ತೇನೆ, ಆದರೆ ಅವರ ಪರಿಚಯ ಇರುವುದಿಲ್ಲ. ನಾನು ಮಧ್ಯ ಖಾರ್ವಿಕೇರಿಯಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನಾನು ಮೀನಿನ ವ್ಯಾಪಾರ ಮಾಡುತ್ತೇನೆ. ಮಧ್ಯ ಖಾರ್ವಿಕೇರಿಯಲ್ಲಿ ಒಂದು 150 ಮನೆಗಳು ಇರುತ್ತದೆ. ಎಲ್ಲವೂ ಒಂದಕ್ಕೊಂದು ತಾಗಿಕೊಂಡು ಇರುತ್ತದೆ ಎಂದರೆ ಸರಿ. ಒಬ್ಬರೊಬ್ಬರನ್ನು ನೋಡಿ ಪರಿಚಯ ಇರುತ್ತದೆ ಎಂದರೆ ಸರಿ. ದೀಪಕ್ ಖಾರ್ವಿಯವರನ್ನು ಕಳೆದ 6 ವರ್ಷಗಳ ಹಿಂದಿನಿಂದ ನೋಡಿ ಪರಿಚಯ ಇರುವುದಿಲ್ಲ.

2. ನಾನು ವ್ಯಯಕ್ತಿಕವಾಗಿ ಮೀನಿನ ವ್ಯವಹಾರ ಮಾಡುತ್ತಿರುತ್ತೇನೆ. ಆದರೆ ಯಾವುದೇ ದಾಖಲೆ ಇರುವುದಿಲ್ಲ. ನನಗೆ ಎಷ್ಟು ಆದಾಯ ಬರುತ್ತದೆ ಎಂದು ಹೇಳಲು ಸಾಧ್ಯ ಇರುವುದಿಲ್ಲ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಹಾರವನ್ನು ಬ್ಯಾಂಕಿನ ಮುಖಾಂತರ ಮಾಡಿರುವುದಿಲ್ಲ. ನನ್ನ ಬಳಿ ಬ್ಯಾಂಕಿನ ಖಾತೆ ಇದೆ. ಒಂದು ಖಾತೆ ಹೊಂದಿರುತ್ತೇನೆ. ನನ್ನದು ಕರ್ನಾಟಕ ಬ್ಯಾಂಕ್, ಕುಂದಾಪುರದಲ್ಲಿ ಖಾತೆ ಇರುತ್ತದೆ. ಕರ್ನಾಟಕ ಬ್ಯಾಂಕ್, ಕುಂದಾಪುರದ ಖಾತೆಯನ್ನು ಸ್ಕೂಲ್ ನಲ್ಲಿ ಇರುವಾಗ ತೆರೆಯಲಾಗಿರುತ್ತದೆ. ನನಗೆ ಈಗ 27 ವರ್ಷ ವಯಸ್ಸಾಗಿರುತ್ತದೆ. 15 ವರ್ಷದಿಂದ ಸಹ ಆ ಖಾತೆ ಇರುತ್ತದೆ.

3. ಮೀನಿನ ವ್ಯವಹಾರವನ್ನು 7 ವರ್ಷಗಳಿಂದ ಮಾಡುತ್ತಿರುತ್ತೇನೆ. ಮೀನಿನ ವ್ಯವಹಾರದಿಂದ ಬಂದ ಹಣವನ್ನು ಬ್ಯಾಂಕಿಗೆ ಹಾಕಿರುವುದಿಲ್ಲ. ನಾನು ಯಾವುದೇ ಸಾಲವನ್ನು ಮಾಡಿರುವುದಿಲ್ಲ. ನನಗೆ ತಿಂಗಳಿಗೆ 40 ರಿಂದ 50 ಸಾವಿರ ಸಂಬಳ ಇರುತ್ತದೆ. ನನ್ನದು ಬಿ.ಪಿ.ಎಲ್ ಕಾರ್ಡ್. ಬಿ.ಪಿ.ಎಲ್ ಕಾರ್ಡ್ ಗೆ ವರಮಾನದ ಮೀತಿ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಿಂಗಳಿಗೆ 40 ರಿಂದ 50 ಸಾವಿರ ವರಮಾನ ಇದ್ದು ಬಿ.ಪಿ.ಎಲ್ ಕಾರ್ಡ್ ನ್ನು ಪಡೆದುಕೊಂಡರೆ ಕಾನೂನಿನ ಪ್ರಕಾರ ತಪ್ಪು ಇರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬಿ.ಪಿ.ಎಲ್ ಕಾರ್ಡ್ ನ ನವೀಕರಣ ಗೊಳಿಸಲು ಅರ್ಜಿಗೆ ತಂಬ್ ಕೊಡಬೇಕು

ಎಂದು ಗೊತ್ತಿರುತ್ತದಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿ 4 ಜನ ಇರುತ್ತೇವೆ. ನಾನು ಮತ್ತು ನನ್ನ ತಂದೆ ದುಡಿಯುವವರು ಇರುತ್ತೇವೆ.

4. 40 ರಿಂದ 50 ಸಾವಿರ ಆದಾಯ ಇದ್ದರೆ ನಾನು ಆದಾಯ ತೆರಿಗೆ ಪಾವತಿಬೇಕಾಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಆದಾಯ ಪ್ರಮಾಣ ಪತ್ರ ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿಗೆ ಹೊರತು ಪಡಿಸಿ ನಮ್ಮ ಗ್ರೂಪಿನ ಆತ್ಮೀಯ ಸ್ನೇಹಿತರಿಗೆ ಹಣ ಕೊಟ್ಟಿರುತ್ತೇನೆ. ಆ ಹಣ ಕೊಟ್ಟ ಬಗ್ಗೆ ನನ್ನ ಬಳಿ ಲೆಕ್ಕಚಾರ ಇರುವುದಿಲ್ಲ. 5 ಲಕ್ಷ ಉಳಿತಾಯ ಆಗಬೇಕಾದರೆ 4 ರಿಂದ 5 ವರ್ಷ ಆಗಬೇಕು ಎಂದರೆ ಸಾಕ್ಷಿ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಮೀನಿನ ವ್ಯವಹಾರದಿಂದ ನನಗೆ ಆದಾಯ ಇರುತ್ತದೆ. ಮೀನಿನ ವ್ಯವಹಾರದ ಬಗ್ಗೆ ದಾಖಲೆ ಇರುವುದಿಲ್ಲ. ಕುಂದಾಪುರ, ಹೊನ್ನಾವರ, ಭಟ್ಕಳ, ತ್ರಾಸಿ, ಗಂಗೊಳ್ಳಿಗಳಲ್ಲಿ ವ್ಯವಹಾರ ಮಾಡುತ್ತೇನೆ. ಅಲ್ಲಿನ ದೋಣಿಯವರ ಹತ್ತಿರ ವ್ಯವಹಾರ ಮಾಡುತ್ತೇನೆ. ಅವರು ತುಂಬಾ ಜನ ಇರುತ್ತಾರೆ. ವ್ಯವಹಾರ ಮಾಡುವಾಗ ಆರೋಪಿತನ ಪರಿಚಯ ಆಗಿರುತ್ತದೆ. ಆರೋಪಿತನೊಂದಿಗೆ 4 – 5 ವರ್ಷ ವ್ಯವಹಾರ ಮಾಡಿರುತ್ತೇನೆ.

6. ಆರೋಪಿತ ನಮಗೆ ಮೀನನ್ನು ಕೊಡುತ್ತಿದ್ದ, ನಾನು ಮಾರಾಟ ಮಾಡುತ್ತಿದ್ದೆ. ತಿಂಗಳಲ್ಲಿ 10 ರಿಂದ 15 ದಿವಸ ಈ ರೀತಿ ಆರೋಪಿತ ವ್ಯಾಪಾರ ಮಾಡುತ್ತಿದ್ದ. ದಿವಸಕ್ಕೆ 20 ರಿಂದ 30 ಸಾವಿರ ವ್ಯವಹಾರ ಮಾಡುತ್ತಿದ್ದೇವು. 20 ರಿಂದ 30 ಸಾವಿರ ವ್ಯವಹಾರ ಮಾಡುತ್ತಿದ್ದ ಬಗ್ಗೆ ಚೀಟಿ ಇಟ್ಟುಕೊಂಡಿಲ್ಲ. ಆರೋಪಿತನ ಜೊತೆಗೆ 4 ವರ್ಷದಿಂದ ಸಂಪರ್ಕ ಇದೆ ಎಂದು ತೋರಿಸಲು ನನ್ನ ಬಳಿ ಯಾವುದೇ ಚೀಟಿ, ದಾಖಲೆ ಇರುವುದಿಲ್ಲ. ಆತ ನಮಗೆ ಮೀನು ಮಾರಾಟ ಮಾಡುತ್ತಿದ್ದ, ನಾನು ಅವನಿಗೆ ದುಡ್ಡು ಕೊಡುತ್ತಿದ್ದೆ. ಸಾಕ್ಷಿ ಮುಂದುವರಿದು ಕೆಲವೊಂದು ಬಾರಿ ನಾನು ಸಹ ಆರೋಪಿಗೆ ಮೀನು ಮಾರಾಟ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಆತನಿಗೆ ಮೀನು ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಒಂದು ಪೈಸೆ ವ್ಯವಹಾರವನ್ನು ಬ್ಯಾಂಕಿನ ಮುಖಾಂತರ ಮಾಡಿರುವುದಿಲ್ಲ. ಆತನ ಹೆಸರಲ್ಲಿ ಬೋಟು ಇರುವುದಿಲ್ಲ.

7. ಆರೋಪಿತನೊಂದಿಗೆ ಬೋಟಿನಲ್ಲಿ ವ್ಯವಹಾರ ಮಾಡಿರುವುದಿಲ್ಲ. ಸಣ್ಣ ದೋಣಿಯಲ್ಲಿ ಬಂದ ಮೀನುಗಳನ್ನು ಆತನಿಂದ ಪಡೆದಿರುತ್ತೇನೆ, ಮೀಡಿಯಂ ದೋಣಿಯಲ್ಲಿ ಬಂದಂತಹ ಮೀನನ್ನು ಖರೀದಿ ಮಾಡಿರುತ್ತೇನೆ. ಅದು ಸಹ ಬಂದಂತಹ ಮೀನನ್ನು ಒಂದು ಬುಕ್ ನಲ್ಲಿ ಬರೆದುಕೊಂಡು ವ್ಯವಹಾರ ಮಾಡುತ್ತಿದ್ದೆ ಎಂದರೆ ಸಾಕ್ಷಿ ಆ ರೀತಿ ಬುಕ್ ನಲ್ಲಿ

ಬರೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆತನೊಂದಿಗೆ ವ್ಯವಹಾರ ಮಾಡುವ ಸಂದರ್ಭದಲ್ಲಿ ನನ್ನ ಖಾತೆಯಲ್ಲಿ 5 ಲಕ್ಷ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳು ಇರುವುದಿಲ್ಲ. 5 ಲಕ್ಷ ವ್ಯವಹಾರ ಮಾಡಿದ್ದೇನೆ ಎಂದು ತೋರಿಸಲು ಸಹ ಯಾವುದೇ ದಾಖಲಾತಿಗಳು ಇರುವುದಿಲ್ಲ. ಆರೋಪಿತ 5 ಲಕ್ಷ ಕೊಡಲು ಬಾಕಿ ಮಾಡಿಕೊಂಡಿದ್ದು ಯಾವಾಗ ಕಾರಣಕ್ಕೆ ಎಂದರೆ ಸಾಕ್ಷಿ ಆರೋಪಿತಮೀನು ವ್ಯವಹಾರಕ್ಕೆ ಅಂತ ನನ್ನ ಬಳಿ ದುಡ್ಡು ತೆಗೆದುಕೊಂಡಿದ್ದ ಎಂದು ನುಡಿಯುತ್ತಾರೆ.

8. ಆರೋಪಿತ ಯಾವಾಗ ಹಣ ಕೇಳಿರುತ್ತಾನೆ ಎಂದು ಗೊತ್ತಿರುವುದಿಲ್ಲ, ಕೇಳಿದ 2 -3 ದಿನದಲ್ಲಿ ಹಣ ಕೊಟ್ಟಿರುತ್ತೇನೆ. 5 ಲಕ್ಷ ಹಣವನ್ನು ನನ್ನ ಸ್ನೇಹಿತರ ಕಡೆಯಿಂದ ಪಡೆದು ಕೊಟ್ಟಿರುತ್ತೇನೆ. ಕಾರ್ತಿಕ್‌ನಿಂದ ಹಣವನ್ನು ಪಡೆದುಕೊಂಡು ಆರೋಪಿಗೆ ಕೊಟ್ಟಿರುತ್ತೇನೆ. ಕಾರ್ತಿಕ್ ಗಂಗೊಳ್ಳಿಯವರು. ಅವರು ಮೀನಿನ ವ್ಯವಹಾರ ಮಾಡುತ್ತಾರೆ. ಕಾರ್ತಿಕ್ ನಿಂದ 3 ಲಕ್ಷ ಪಡೆದಿರುತ್ತೇನೆ. ಕಾರ್ತಿಕ್ ನಿಂದ ಹಣ ಪಡೆಯುವಾಗ ಸಾಲ ಕೊಡಲು ಹಣ ತೆಗೆದುಕೊಂಡಿರುತ್ತೇನೆ ಎಂದು ಕಾರ್ತಿಕ್ ಗೆ ಹೇಳಿರುವುದಿಲ್ಲ. ಕಾರ್ತಿಕ್ ನನಗೆ ಹಣ ಕೊಡುವಾಗ ಯಾವಾ ದಾಖಲೆ ಮಾಡಿಕೊಂಡಿಲ್ಲ. 5 ಲಕ್ಷ ಹಣ ಕೊಡುವಾಗ ಯಾವುದೇ ದಾಖಲೆ ಮಾಡಿಕೊಂಡಿರುವುದಿಲ್ಲ, ನಗದು ಮುಖಾಂತರ ಕೊಟ್ಟಿರುತ್ತೇನೆ. ಯಾವ ದಿನಾಂಕ ಹಣ ಕೊಟ್ಟೆ ಎಂದು ನೆನಪಿರುವುದಿಲ್ಲ.

9. ನಾನು ಹಣ ಕೊಡುವಾಗ ಆರೋಪಿಗೆ ಬೇರೆ ಸಾಲ ಇದ್ದ ಬಗ್ಗೆ ನಾನು ಕೇಳಿಕೊಂಡಿರುವುದಿಲ್ಲ. ನಾನು ಹಣ ಕೊಡುವಾಗ ಆತ ಯಾವ ರೀತಿಯಲ್ಲಿ ಹಣ ಕೊಡುತ್ತೀಯಾ ಎಂದು ಕೇಳಿಕೊಂಡಿರುವುದಿಲ್ಲ. ಚೆಕ್ ಸಹಿ ವ್ಯತ್ಯಾಸ ಇದೆ ಎಂದು ಅಮಾನೀಕರಣ ಆಗಿದೆ ಎಂದು ತಿಳಿದುಕೊಂಡಿರುತ್ತೇನೆ. ನಾನು ಈ ಬಗ್ಗೆ ಕ್ರಮ ಕೈಗೊಳ್ಳಲು ಯಾವ ವಕೀಲರ ಬಳಿ ಹೋಗಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಆ ಸಮಯದಲ್ಲಿ ದೀಪಕ್ ಖಾರ್ವಿಯವರು ಇದೇ ಆರೋಪಿತನ ವಿರುದ್ಧ ಪ್ರಕರಣ ದಾಖಲಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

10. ನಾನು ಸಲ್ಲಿಸಿದ ದೂರಿನಲ್ಲಿ ಅಷ್ಟು ಹಣವನ್ನು ಆರೋಪಿಗೆ ಏಕೆ ಕೊಟ್ಟಿರುತ್ತೇನೆ ಎಂದು ನನ್ನ ವಕೀಲರಿಗೆ ಹೇಳಿರುತ್ತೇನೆ,ಸಾಕ್ಷಿ ಮೀನು ವ್ಯವಹಾರಕ್ಕೆ ಕೊಟ್ಟಿರುತ್ತೇನೆ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಕೊಟ್ಟ ನೋಟಿಸು ಹಾಗೂ ದೂರನ್ನು ಓದಿ ನೋಡಿರುತ್ತೇನೆ. ಯಾವ ದಿನಾಂಕದಂದು, ಯಾರ ಕಾರಣಕ್ಕೆ ಆರೋಪಿಗೆ ಹಣವನ್ನು ಕೊಡಲಾಗಿರುತ್ತದೆ ಎಂದು ದೂರಿನಲ್ಲಿ ಹಾಗೂ ನೋಟಿಸಿನಲ್ಲಿ ಬರೆದಿದೆಯಾ ಎಂದರೆ ಸಾಕ್ಷಿ

ಮೀನಿನ ವ್ಯಾಪಾರಕ್ಕೆ ಅಂತ ಬರೆಯಲಾಗಿರುತ್ತದೆ, ಯಾವ ದಿನಾಂಕ ಕೊಟ್ಟಿರುತ್ತೇನೆ ಎಂದು ನಮೂದಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಏನು ಬರೆದಿದೆ ಎಂದು ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ.

11. ನಾನು ಮತ್ತು ದೀಪಕ್ ಖಾರ್ವಿಯವರು ಒಂದೇ ಊರಿನವರು ಹಾಗೂ ಮಿತ್ರರು ಎಂದರೆ ಸರಿಯಲ್ಲ. ದೀಪಕ್ ಖಾರ್ವಿಯವರ ತಂಗಿ ದಿವ್ಯಾ ಖಾರ್ವಿ ಹಾಗೂ ಆರೋಪಿಗೆ ಸಂಪರ್ಕ ಇದ್ದು ಬೇರೆ ಬೇರೆ ಗೊಂದಲ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೂ ಹಾಗೂ ಆರೋಪಿಗೂ ಯಾವುದೇ ಸಂಪರ್ಕ, ವ್ಯವಹಾರ ಹಾಗೂ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಎಲ್ಲಾ ವಿಚಾರಕ್ಕೆ ಗೊತ್ತಿಲ್ಲ ಗೊತ್ತಿಲ್ಲ ಎಂದು ತಪ್ಪಿಕೊಳ್ಳಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ 5 ಲಕ್ಷ ಕೊಡಲು ಸಾಮರ್ಥ್ಯವು ಇರುವುದಿಲ್ಲ ಹಾಗೂ ವರಮಾನ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ